ಮಕ್ಕಳನ್ನು ಮೀಯಿಸುವುದು ಅಮ್ಮಂದಿರ ಪಾಲಿಗೆ ಬಹು ದೊಡ್ಡ ಸಂಭ್ರಮ. ಮಕ್ಕಳ ಪಾಲಿಗೆ ನೀರೆನ್ನುವುದೇ ಸಂಭ್ರಮ. ಅಮ್ಮ–ಮಗುವಿನ 'ಮೀಯಿಸುವ ಆಟ'ವನ್ನು ನೋಡುವುದೂ ಒಂದು ಅಪೂರ್ವ ಅನುಭವ. ನೀರಾಟದ ಇಲ್ಲಿನ ಚಿತ್ರಪಟಗಳು ಸಹೃದಯರನ್ನು ಅವರವರ ಬಾಲ್ಯಕಾಲದ ಮಿಂದಾಟದ ಭಾವಲೋಕಕ್ಕೆ ಮರಳಿ ಕೊಂಡೊಯ್ಯುವಷ್ಟು ಪ್ರಭಾವಶಾಲಿಯಾಗಿವೆ.

■ ಎ. ರಾಮು
ಚಿತ್ರಗಳು: ತನು ರಾವ್ ಸಿಂಧ್ಯ

ಇದೋ ಈ ತಂಬಿಗೆ ನೀರು ಗಂಗೆಯವತಾರಕ್ಕೆ
ಇದು ಇದೋ ಆ ಮಣಿಕರ್ಣಿಕೆಗೆ
ಮಿಂದ ನದಿ ನೆನಪಿಗೆ ಒಂದೊಂದು ತಂಬಿಗೆ ನೀರು

ಇದು ವೈದೇಹಿಯವರು ಬರೆದಿರುವ ಜನಪ್ರಿಯ ಸ್ನಾನದ ಹಾಡು. ಹಾಂ, ಇಲ್ಲಿನ ಸ್ನಾನ ಸಾಮಾನ್ಯವಾದುದಲ್ಲ – ಅದು ಸಾಕ್ಷಾತ್ ಶಿವನ ಮಜ್ಜನ! ಸ್ನಾನ ಮಾಡಿಸುತ್ತಿರುವುದು ಗಿರಿಜೆ. 'ಶಿವನ ಮೀಯಿಸುವ ಹಾಡು' ಕವಿತೆಯಲ್ಲಿನ ಸ್ನಾನದ ಸಂಭ್ರಮ ನೋಡಿ:

ಮೂಗಾಲು ಮಣೆಯಲ್ಲಿ ಮೂಗಣ್ಣಿನವನ
ಕುಳ್ಳಿರಿಸಿ ಪ್ರೀತಿಯೊತ್ತಿ
ಮೂಜಗದಲೋಲಾಡಿ ಎಂತು ದಣಿದವೋ ಪಾದ
ಎಂಬ ನೆಪತುದಿಯಿಂದ ಧೂಳನೆತ್ತಿ
ಯಾರ ಮನೆ ಬೀದಿಯದು ಪತ್ತೆ ಹಚ್ಚಿ...

ಪಾರ್ವತಿ ತನ್ನ ಪತಿಯನ್ನು ಮೀಯಿಸುವ ಈ ಪದ್ಯದಲ್ಲಿ, ಗಂಡನ ಕುರಿತ ಪತ್ನಿಯ ಕಾಳಜಿ ಎದ್ದುಕಾಣುತ್ತದೆ. ಜೊತೆಗೇ ಇಣುಕುವುದು, ಗಂಡನ ಕುರಿತ ಅನುಮಾನ. ಯಾರ ಮನೆಗೆ ತನ್ನ ಗಂಡ ಪಾದ ಬೆಳೆಸಿರಬಹುದು ಎನ್ನುವ ಅನುಮಾನದೊಂದಿಗೆ, 'ಮುಗಿಯಿತೇ ಬೇಟ' ಎಂದು ಶಿವೆ ಕೊಂಕನ್ನೂ ನುಡಿಯುತ್ತಾಳೆ. ಆದರೆ, ಈ ಅನುಮಾನ, ಅಳಲು, ಕೊಂಕು – ಎಲ್ಲವನ್ನೂ ಮೀರಿ ಮೀಯಿಸುವಿಕೆಯಲ್ಲಿ ಎದ್ದುಕಾಣಿಸುವುದು ಪಾರ್ವತಿಯ ಮಾತೃತ್ವ. ಗಂಡನನ್ನೇ ಮಗುವನ್ನಾಗಿಸಿಕೊಂಡಂತೆ ಆಕೆ ಮೀಯಿಸುವ

